ಮಡಿ ಮಡಿ ಮಡಿಯೆಂದು ಮೂರ್ಮಾರು ಹಾರುತಿ

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page no. 42.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 430.
3. **Note:** These lyrics are not available in the books of Prof SK Ramachandra Rao
4. **Note:** The lyrics are as per Ref. 1. The lyrics in Ref. 2 are almost similar to that of Ref. 1 except few differences which are mentioned in yellow highlights.
5. **Note:** Singer has followed lyrics as in Ref. 2.

ರಾಗ: ನಾದನಾಮಕ್ರಿಯೆ ತಾಳ: ಆದಿ

ಮಡಿ ಮಡಿ ಮಡಿಯೆಂದು ಮೂರ್ಮಾರು ಹಾರುತಿ
ಮಡಿಯೆಲ್ಲಿ (ಬಂದಿತೊ) (ಬಂತೆ) ಬಿಕನಾಶಿ ॥ ಪ ॥

ಮಾಡಿಯೂ ನೀನೆ ಮೈಲಿಗೆ ನೀನೆ
ಸುಡಲಿ ನಿನ್ನ ಮಡಿ ಬಿಕನಾಶಿ ॥ ಅಪ ॥

ಎಲುವು ಚರ್ಮ ಮಲ ಮೂತ್ರ ಗುಂಡಿಯಲಿ
ನಲಿಯುತ (ನಿಂತೆಯೊ) (ನಿಂತೆಯೆ) ಬಿಕನಾಶಿ
ನೆಲೆಗೊಂಡ ನವ ದ್ವಾರದ ಹೊಳೆಯೊಳು
(ನರಳುತ) (ಅಳುತ) ನೀ ಬಿದ್ದೆ ಬಿಕನಾಶಿ ॥ ೧ ॥

ಹುಟ್ಟಲು ಸೂತಕ ಸಾಯಲು ಸೂತಕ
ನಟ್ಟ ನಡುವೆ ಬಂತೆ ಬಿಕನಾಶಿ
(ಬಿಟ್ಟು ಬಿಡದೆ ಕಾವೇರಿಯ) (ಪಟ್ಟಣ ಕಾವೇರಿಲಿ) ಮುಳುಗಲು (ನಿನ್ನ)
ಮುಟ್ಟು (ಹೋಹುದೆ) (ಹೋಗುವುದೆ) ಬಿಕನಾಶಿ ॥ ೨ ॥

ಚರ್ಮವ ತೊಳೆದರೆ ಕರ್ಮವು (ಹೋಹುದೆ) (ಹೋಗ್ವುದೆ)

ಮರ್ಮವ ತಿಳಿಯದೆ ಬಿಕನಾಶಿ
ಬೊಮ್ಮನಯ್ಯ ಪುರಂದರ ವಿಠ್ಠಲನ ಪಾಡಿ
ನಿರ್ಮಲದಿ (ಬಾಳೆಲೊ) (ಬಾಳೆ) ಬಿಕನಾಶಿ ॥ ೩ ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಮನಃ ಶುಚಿಯೆ ನಿಜವಾದ ಮಾಡಿ ಎಂಬುದನ್ನು ದಾಸರು ಈ ಹಾಡಿನಲ್ಲಿ ಸ್ಪಷ್ಟವಾದ ಮಾತುಗಳಲ್ಲಿ ಹೇಳಿದ್ದಾರೆ.

ಬಿಕನಾಸಿ = ತಿರಿದು ಕೂಳು ತಿನ್ನುವವ

ಮುಟ್ಟು = ಮೈಲಿಗೆ

Classification: Keerthane
Ankita: purandara vittala
Location: NA
Category: samsara chitragalu, Loka Neeti.
Sub-Category: madi, mailige, bikanashi, nadi, huttu, marana, karma, nadi,
Pravachana: NA
Explanation: NA